**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ತಿ. ನರಸೀಪುರ.**

ಸಿಸಿ ಸಂಖ್ಯೆ: 524/2017

ಪ್ರಾ.ಸಾ-2

| | | |
|---|---|---|
| ಹೆಸರು | : | ರಾಮಸ್ವಾಮಿ ಹೆಚ್.ಜಿ. |
| ತಂದೆಯ ಹೆಸರು | : | ಟಿ. ಗವಿಗೌಡ |
| ವಯಸ್ಸು | : | 57 |
| ವೃತ್ತಿ | : | ಸಹಾಯಕ ಪೊಲೀಸ್ ಉಪನಿರೀಕ್ಷಕರು,<br>ಬನ್ನೂರು ಪೊಲೀಸ್ ಠಾಣೆ. |
| ವಾಸ | : | ಬನ್ನೂರು |

**ದಿನಾಂಕಃ 02.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ದಂಡ ಪ್ರಕ್ರಿಯೆ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷಿಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಸೆಪ್ಟೆಂಬರ್ 2019 ರಿಂದ ಮಾರ್ಚ್ 2022 ರವರೆಗೆ ನಾನು ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಹಾಯಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ಈ ಪ್ರಕರಣದ ಆರೋಪಿತರ ವಿರುದ್ಧ ಉದ್ಘೋಷಣ ಮಾಡಲು ನ್ಯಾಯಾಲಯದಿಂದ ವಾರೆಂಟ್ ಬಂದಿದ್ದು, ಆ ಪ್ರಕಾರ ದಿನಾಂಕಃ 11.02.2021 ರಂದು ಮಳವಳ್ಳಿ ತಾಲ್ಲೂಕಿನ ಕೋಡಿಪುರ ಗ್ರಾಮದಲ್ಲಿ ಆರೋಪಿತನ ಮನೆಯ ಮುಂಭಾಗಕ್ಕೆ ಹೋಗಿ, ಅಲ್ಲಿದ್ದವರನ್ನು ವಿಚಾರಿಸಲಾಗಿ, ಅಲ್ಲಿ ಆರೋಪಿತ ಇರಲಿಲ್ಲವೆಂದು ತಿಳಿಸಿದರು.

ಸಿಸಿ ಸಂಖ್ಯೆ: 524/2017

ನಂತರ ಆ ಮನೆಯ ಗೋಡೆಗೆ ಉದ್ಘೋಷಣದ ಪ್ರತಿಯನ್ನು ಹಾಕಿ, ಪೌರ ಕಾರ್ಮಿಕರಿಂದ ಕೂಗಿಸಲಾಯಿತು. ಬೆಳಗ್ಗೆ 10.15 ರಿಂದ 11.30 ಗಂಟೆ ಸಮಯದಲ್ಲಿ ಪಂಚನಾಮವನ್ನು ಜರುಗಿಸಲಾಯಿತು. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-5 ಮತ್ತು 5(ಎ) ಎಂದು ಗುರುತಿಸಲಾಯಿತು.

ಪಂಚನಾಮಕ್ಕೆ ಜಗದೀಶ್ ಮತ್ತು ರವಿ ಎನ್ನುವವರು ಸಹಿ ಮಾಡಿದ್ದರು.

ನಂತರ ಆ ಕುರಿತು ವರದಿಯನ್ನು ನನ್ನ ಮೇಲಾಧಿಕಾರಿಗಳ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

(ತೆ ನ್ಯಾದಲ್ಲಿ ಬೆರಳಚ್ಚುಗೊಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ**